ಕವಿತೆ



**ಕೆ. ಷರೀಫಾ**

ಕಲೆ: ರೂಪಶ್ರೀ ಕಲ್ಲಿಗನೂರು



# ಮಹಿಳಾ ದಂಡು

ಮನೆಯ ಹೆಣ್ಣು ದೇವತೆ ನಾನು
ನಾನೊಂದು ಬಹುದೊಡ್ಡ ಸರಕು
ಕೊಳ್ಳಲೂ, ಮಾರಲೂ ಕೂಡ
ಲೋಕ ನನ್ನ ಪೂಜಿಸಿದ್ದಕ್ಕಿಂತ
ಭೋಗಿಸಿದ್ದೇ ಹೆಚ್ಚು.

ನನ್ನ ನಡೆಯ ಮೇಲೆ
ಧರ್ಮಶಾಸ್ತ್ರಗಳ ಸರ್ಪಗಾವಲು
ರೀತಿರಿವಾಜುಗಳ ಬೇಲಿ
ಕಟ್ಟು ಹಾಕಿಸಿ ಚೌಕಟ್ಟು ಚಿತ್ರ
ನೇತು ಹಾಕಿದ್ದಾನೆ ಗೋಡೆಗೆ
ಅಹಂಕಾರದ ಸಂಕೇತ ಸನಾತನ.

ಇಲ್ಲಿ ನಿಷಿದ್ಧವಾಗಿದೆ ಓದುಬರಹ
ಅಡುಗೆಬಾಣಂತಿ ಖೋಲಿಗಳೇ ಗತಿ
ಹೊಗೆಗೂಡಿನ ನಡುವೆ ವಾಸ ನರಳಾಟ
ಗವ್ವೆನುವ ಗಾಳಿಬೆಳಕಿಲ್ಲದ ಕತ್ತಲೆ
ಗವಿಯ ಕಿಟಕಿಗೆ ಇಳಿಬಿಟ್ಟ ಪರದೆ
ಶುದ್ಧಗಾಳಿಯೂ ಇಲ್ಲಿ ನಿಷಿದ್ಧ.

ಭೋರಿಡುವ ಏಕಾಂತದ ಶಿಕ್ಷೆ
ಇಲ್ಲಿ ಯಾರಿಗೂ ಪ್ರವೇಶವಿಲ್ಲ
ಪಡಸಾಲೆಗೂ ಬರಲು ಪ್ರವೇಶವಿಲ್ಲ.
ಜನಾನಾ ಖಾನೆಗಳಲ್ಲೇ ಉಸಿರುಗಟ್ಟುವ.
ಘಮಟುಗಟ್ಟಿದ ಅಡುಗೆ ಖೋಲಿ
ಬಿಟ್ಟರೆ ಜಿಡ್ಡುಗಟ್ಟಿದ ಹೆರಿಗೆ ಕೋಣೆ.

ಸೀತೆಗೂ ಶಂಕಿಸಿ ಕಾಡಿಗಟ್ಟಿದವಗೆ
ಹಣ್ಣೆಂದರೆ ಅವಳು ದೇವತೆಯಂತೆ
ಶೀಲ ಶಂಕಿಸಿ ಅಗ್ನಿ ಹಾಯಿಸಿದವ
ಲೋಕಪೂಜಿಪ ಪುರುಷೋತ್ತಮ
ಉರಿಪಂಜು ಕೊಳ್ಳಿಗಳು ಧಗಧಗಿಸಿ
ಮೌನ ಸಂಕಟಗಳು ಹಾಡಾದವು.

ಹೊಲಿದ ತುಟಿಗಳಿಂದ ಮಾತು
ಹೊರಬಂದವು ಶಬ್ದಗಳು
ಘೋಷಣೆ, ಘರ್ಜನೆ ತಾರಕಕ್ಕೇರಿ
ಕೈಯಲ್ಲಿ ಹಿಡಿದ ಹರಲಿಗಳು
ಬೆನ್ನುಬಿದ್ದ ಬೇತಾಳಗಳಾಗಿ ಅವರು
ಸಾಗರದಂತೆ ಹರಿದು ಬಂದರು.

ಕೈಯಲ್ಲಿ ಪಂಜು ಹಿಡಿದ ನಾರಿಯರು
ಮನುಸಂಹಿತೆಗಳ ಸುಟ್ಟು ಹಾಕಿದ್ದಾರೆ.
ಮೈಮೇಲಿನ ದಾಗೀನ ದಸ್ತಾವೇಜು
ಕಳಚಿಟ್ಟು ಸ್ತ್ರೀಧರ್ಮದ ವ್ಯಾಖ್ಯಾನ ಕೇಳಿ
ಬೀದಿಯಲಿ ಮೆರವಣಿಗೆ ಹೊರಟಿದ್ದಾರೆ
ಘೋಷಣೆಗಳ ಎಗ್ಗಿಲ್ಲದೇ ಕೂಗುತ್ತ
ಮಹಿಳೆಯರ ದಂಡು ಬೀದಿಬೀದಿಯಲಿ
ಉಟ್ಟ ಸೀರೆಯ ಸೆರಗು ಹರಿದು
ಬಾವುಟ ಮಾಡಿಕೊಂಡಿದ್ದಾರೆ.